(6ನೇ ಪುಟದಿಂದ)

ಬುದ್ಧನ ಸರಣಿ ಚಿತ್ರಗಳಲ್ಲಂತೂ ಕಾರ್ತಿಕ್ ಪವಾಡವನ್ನೇ ಮಾಡಿದಂತಿದೆ. ಭೌತಿಕ ಸುಖ ಭೋಗಗಳನ್ನು ಬಿಟ್ಟು ಬುದ್ಧ ಪ್ರಕೃತಿಯ ಶಿಶುವಾಗುತ್ತಾ ಬೆಳೆಯುವುದನ್ನು ಕಾರ್ತಿಕ್ ನವಿರಾಗಿ ಚಿತ್ರಿಸಿದ್ದಾರೆ.

ಕಳೆದ ವರ್ಷ ಮಧ್ಯಭಾಗದಲ್ಲಿ ಕಾರ್ತಿಕ್ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಮೊದಲ ಸಲ ಏಕವ್ಯಕ್ತಿ ಪ್ರದರ್ಶನ ನೀಡಿದ್ದರು. ಈ ವರ್ಷ ಮತ್ತೆ ನವೆಂಬರ್ 1ರಂದು ಚಿತ್ರಕಲಾ ಪರಿಷತ್‌ನಲ್ಲೇ ಅವರ ಮತ್ತೊಂದು ಪ್ರದರ್ಶನ ಆರಂಭವಾಗಿದ್ದು, 8ನೇ ತಾರೀಕಿನವರೆಗೆ ನಡೆಯಲಿದೆ. ಈಗಾಗಲೆ ನವದೆಹಲಿ, ಪಾಂಡಿಚೇರಿ, ಚೆನ್ನೈಗಳಲ್ಲಿ ಇತರ ಕಲಾವಿದರ ಜತೆ ತಮ್ಮ ಕಲಾಪ್ರದರ್ಶನ ನಡೆಸಿರುವ ಕಾರ್ತಿಕ್ ಮಿತಭಾಷಿಯೂ ಹೌದು. ಅವರಿಗೆ ಮಾತಿಗಿಂತ ಬಣ್ಣಗಳ ಮೇಲೆಯೇ ಹೆಚ್ಚು ನಂಬಿಕೆ.



